ಹೊಂಗಲದಾಗ ಭೆಟ್ಟಿಯಾಗಿದ್ದ. ಅಂವನ್ನ ಒಂದು ಕಡೆ ಕುಂದ್ರಿಸಿಕೊಂಡು ಊರಾಗ ಎಲ್ಲಾ ಹಿಂಗಿಂಗ ಆತು ಹೇಳಿದೆ. ದ್ಯಾವಣ್ಣ ಮತ್ತು ಶಿವವ್ವನ ಮನಿತನಕ್ಕ ಬಾಳ ಧಕ್ಕಿಯಾತು ಅಂದೆ. ಅಂವನೂ ಉಸ್ ಅಂತ ಕನಿಕರಪಟ್ಟ. ಆಮ್ಯಾಲ ಅಂವ ಏನು ಹೇಳಿದಾ ಗೊತ್ತೇನು? 'ಯಜಮಾನರೆ, ಅವ್ವಾರಿಗೆ ಏನೂ ನಿರಾಸೆಯಾಗಬ್ಯಾಡ ಅಂತ ಹೇಳ್ರಿ. ಆಗಿದ್ದು ಆಗಿಹೋಗೇತಿ. ನಾ ಹಿಂದೆ ಹೇಳಿದ್ದೆ. ಎರಡು ಹೆಣ್ಣುಗಳು ಅಂವನ ಜೀವನದಾಗ ಬರ್ತಾವ ಅಂತ. ಎರಡು ಹೆಂಗಸರು ಅಂದ್ರ ಎರಡು ಬದುಕು ಅಂತ. ದ್ಯಾವಣ್ಣನ ಉತ್ಕರ್ಷ, ಏಳ್ಗಿ ಇನ್ನ ಮ್ಯಾಲ ಐತಿ. ಮೊನ್ನಿ ಆಗಿದ್ದು ಒಂದು ಕಂಟಕ. ದ್ಯಾವಣ್ಣಗ ಸ್ವಲ್ಪ ಸೆರಗು ಬಡಿಕೊಂಡ ಹೋಯ್ತು ಅಂತ ಅನ್ನಬಹುದು. ನಿಜವಾಗಿ ಆ ಕಂಟಕ ಮೂರನೆ ವ್ಯಕ್ತಿದು. ಅಂದ್ರ ನೀವೆ ಹೇಳಿದ್ಹಂಗ ಕಂಡಕ್ಟರಂದು! ಅಂವ ಒಳ್ಳೆಯಂವನೋ, ಕೆಟ್ಟವನೋ ಅನ್ನೋದನ್ನ ನಾವು ಹೇಳೋದು ಬ್ಯಾಡ. ಒಳ್ಳೆ ವಿಚಾರ ಕೆಟ್ಟ ವಿಚಾರ ಎಲ್ಲರೊಳಗು ಇರ್ತಾವ. ಆ ಸಮಯದಾಗ ಕೆಟ್ಟ ವಿಚಾರ ಮೇಲುಗೈ ಸಾಧಿಸೇತಿ. ಅಷ್ಟೇ. ಅದಕ್ಕ ಅಂಜಬಾರದು, ಎಳ್ಳಕಾಳಷ್ಟೂ ಅಳುಕಬಾರದು. ದ್ಯಾವಣ್ಣ ಸಾಹುಕಾರರಿಗೆ ಹೇಳ್ರಿ. ಮಲ್ಲೂರಿಗೆ ಹೋಗಿ ಹೊಳ್ಳಿ ಹೊಟೇಲು ಸುರು ಮಾಡಿದ್ರ ಅವರಿಗೆ ಒಳ್ಳೆ ಶಕುನ ಐತಿ ಅಂತ ಗಿಳಿ ಹೇಳಾತೈತಿ. ಬ್ಯಾರೆ ಅವಕಾಶನೂ ಬರಬಹುದು. ಅದೇ ನಾ ಹೇಳಿದ್ನೆಲ್ಲ. ಎರಡನೆ ಜೀವನ ಅಂತ. ಆಗಲೂಬಹುದು. ಇಲ್ಲಾ ಆಗದೇನೂ ಇರಬಹುದು. ಆ ವ್ಯಾಳೆದಾಗ ನಾವು ಹೆಂಗ ಸ್ಪಂದಿಸತೇವಿ ಅನ್ನೋದರ ಮ್ಯಾಲ ಎಲ್ಲಾ ನಿಂತಿರ್ತದ. ಇನ್ನೊಂದು ಹೇಳ್ತೇನಿ. ದ್ಯಾವಣ್ಣನವರಿಗೆ ಹೇಳ್ರಿ. ಅವರು ಯಾವುದನ್ನೂ ಬಾಳ ಮನಸ್ಸಿಗೆ ತಗೋಬಾರದು ಅಂತ. ದ್ಯಾವಣ್ಣಗ ಒಳ್ಳೇದ ಆಗತೈತಿ. ಅವ್ವಾರಿಗೂ ನನ್ನ ನಮಸ್ಕಾರ ತಿಳಿಸ್ರಿ. ಗಿಣಿ ಅವರನ್ನ ನೆನೆಸಿಕೊಳ್ತಾ ಇರ್ತೇತಿ ಅಂತ ತಿಳಿಸ್ರಿ ಅವ್ವಾರಿಗೆ.'

ಗಿಣಿ ನೆನೆಸಿಕೊಳ್ಳುತ್ತಿದೆಯೆಂದರೆ ಅವನಿಗೆ ಕೊಡಬೇಕಾದ ರಕಮನ್ನು ಕೊಡಬೇಕೆಂದು ಅರ್ಥ. 'ಅಕ್ಕಾ, ಅವನ ಕೈಯಾಗ ನೂರಾ ಒಂದು ರೂಪಾಯಿ ಇಟ್ಟು ಬಂದೆ. ಅಂವಗ ಕೊಡಲಿಲ್ಲ ಅಂದ್ರೆ ನೀ ಬೈಯ್ತಿ. ಅದಕ್ಕೆ', ಹರಕೆಯ ದುಡ್ಡನ್ನು ಇಟ್ಟುಕೊಳ್ಳಬಾರದೆಂದು ಶಿವವ್ವ ಒಳಗೆ ಹೋಗಿ ಅಷ್ಟು ದುಡ್ಡು ಕಾಕಾನ ಕೈಯಲ್ಲಿಟ್ಟಳು ಮತ್ತು ಗಿರಿಯಪ್ಪ ಶಾಸ್ತ್ರ ಹೇಳುತ್ತಿರಬಹುದಾದ ದಿಕ್ಕಿನೆಡೆ ಭಕ್ತಿಯಿಂದ ಕೈಮುಗಿದಳು. ಗಿರಿಯಪ್ಪ ಕೊನೆಯಲ್ಲಿ ಹೇಳಿದ್ದ ಮತ್ತೊಂದು ಮಾತನ್ನು ಕಾಕಾ ಶಿವವ್ವನಿಗೆ ಅಪ್ಪಿತಪ್ಪಿಯೂ ಹೇಳಲಿಲ್ಲ. ಮುದುಕಿಯನ್ನು ಭೆಟ್ಟಿಯಾಗಿ ಸುಮಾರು ಹದಿನೈದು ದಿನಗಳಾಗಿರಬೇಕು. ಹೊಂಗಲದಲ್ಲಿ ಕಾಕಾ ಬಸ್ಸು ಇಳಿಯುತ್ತಿರಬೇಕಾದರೆ ಅನತಿ ದೂರದಲ್ಲಿ ದೇವಣ್ಣ ಕಾಣಿಸಿದ. ಕಾಕಾ ನಾಲ್ಕಾರು ಹೆಜ್ಜೆ ನಡೆದು ಮುಂದೆ ಬರುತ್ತಿದ್ದಂತೆಯೇ ಆತ ಬಂದು ನಮಸ್ಕಾರ ಹೇಳಿದ.

'ನಮಸ್ಕಾರಪಾ ದ್ಯಾವಣ್ಣಾ, ಏನು ಮುಂಜಮುಂಜಾನೆಯೆ ಸಿಕ್ಕಿಬಿಟ್ಟೆ? ಆರಾಮ ಅದಿಯಿಲ್ಲೊ? ಶಿಂದೋಗಿ ಕಡೆ ಹೊಂಟಿಯೇನು?'

'ಇಲ್ಲ, ಎಲ್ಲೂ ಹೊಂಟಿಲ್ಲ. ಅಕಸ್ಮಾತ್ ನೀ ಸಿಕ್ಕರೂ ಸಿಗಬಹುದೇನೋ ಅಂತ ಬಂದಿದ್ದೆ. ನಿನ್ನೆನೂ ಬಂದಿದ್ದೆ. ಏನ್ ಕಾಕಾ ನೀನು? ನಮ್ಮ ಊರಿಗೆ ಹೋಗಿದ್ದೆಂತ? ನನಗೆ ಹೇಳೇ ಇಲ್ಲ. ನಾ ಮೊನ್ನೆ ಹೋಗಿದ್ದೆ. ಅವ್ವಾ ಎಲ್ಲಾ ಹೇಳಿದ್ಲು'.

'ಸುಮ್ಮನೆ ಆ ಕಡೆ ಹೋಗಿದ್ದೆ. ಭೆಟ್ಟಿಯಾಗಿ ಬಂದೆ. ಬಾ. ಇಲ್ಲೇ ಸಮೀಪ ಎಲ್ಲ್ಯಾರ ಒಂದು ಕಪ್ ಚಾ ಕುಡಿಯೋಣು' ದೇವಣ್ಣ ಕೆಲಸಕ್ಕಿರುವ ಹೊಟೇಲ್ ಎಂದರೆ ಅವನಿಗೂ ಮುಜುಗರವೆಂದು ಹತ್ತಿರದ ಇನ್ನೊಂದು ಹೊಟೇಲಿಗೆ ಹೋಗಿ ಕೂಡ್ರಿಸಿಕೊಂಡ. ಸ್ವಲ್ಪ ಜಾಸ್ತಿ ಹೊತ್ತೇ ಮಾತಾಡಿದರು. ಮೊದಮೊದಲು ದೇವಣ್ಣ ಮಲ್ಲೂರಿಗೆ ಬರಲು ಸುತಾರಾಂ ಒಪ್ಪಲಿಲ್ಲ. ಕೊನೆಗೆ ದುಂಡಪ್ಪ ಹೇಳಿದ.

'ದ್ಯಾವಣ್ಣ, ನಾ ಒಂದು ಮಾತು ಹೇಳಲೇನು? ಬ್ಯಾರೆದವರ ಹೊಟೇಲಿನಲ್ಲಿ ಎಷ್ಟು ದಿನ ಅಂತ ಮಾಡಾಂವದಿ? ನಿನಗ ಬ್ಯಾಸರ ಆಗಂಗಿಲ್ಲೇನು? ನೋಡು, ನಿನ್ನ ಆರೋಗ್ಯ ಸೈತ ಸ್ವಲ್ಪ ಇಳಿದಂಗ ಕಾಣ್ತದ. ಈಗಿನ ನಿನ್ನ ಮಾಲಿಕರು ಚುಲೋ ಅದಾರು. ಆ ಮಾತು ಬ್ಯಾರೆ. ಆದ್ರೆ ಪರಿಸ್ಥಿತಿ ಯಾವಾಗ್ಲೂ ಹಿಂಗೆ ಇರ್ತೈತಿ ಅಂತ ಹೇಳಾಕ ಬರಂಗಿಲ್ಲ. ನಿನಗೂ ನಿನ್ನದೆಯಾದ ವ್ಯಕ್ತಿತ್ವ ಇರ್ತೇತಿ. ಅದು ಅಲ್ಲಿ ಮಸುಕಾಗ್ತಾ ಹೊಂಟೇತಿಲ್ಲೊ! ನಿನ್ನಷ್ಟಕ್ಕೆ ನೀನೆ ವಿಚಾರ ಮಾಡು. ಮಲ್ಲೂರು ಬ್ಯಾರೆ ಊರು ಅಲ್ಲ. ಅದು ನಿನ್ನೂರು. ನಿನಗೆ ಒಬ್ಬನಿಗೆ ಮಾಡಲಿಕ್ಕೆ ಕಷ್ಟ ಅಕ್ಕೇತಿ ಅಂತಿಯಲ್ಲ? ಹಿಂಗ ಮಾಡೋಣು, ಒಂದಷ್ಟು ದಿನಾ ನಿಮ್ಮ ಅವ್ವನ್ನ ಕರೆಸೋಣು. ಆಕೀಗಿ ಎಲ್ಲಾ ಗೊತ್ತಿದ್ದದ್ದೆ ಐತಿ. ಬೇಕಾರ ಆ ಹುಡುಗ ನಾಗಣ್ಣ ಅದಾನಲ್ಲ, ಸಹಾಯಕ್ಕ ನಾ ಒಪ್ಪಿಸತೇನಿ. ಇನ್ನೊಬ್ಬ ಅದಾನು ಶಿವಣ್ಣ ಅಂತ. ಅವನೂ ಖಾಲಿ ತಿರಗತಿರತಾನು. ಅಂವಗೂ ಹೇಳತೇನಿ. ಆತಿಲ್ಲೋ? ಇಲ್ಲಿ ಲೋಕ ಬ್ಯಾರೆ. ನೀನು ರೆಕ್ಕಿ ಬಿಚ್ಚಿ ಹಾರಿದಾಂವ. ಇಲ್ಲಿ ನಿನಗ ರೆಕ್ಕಿಯೇ ಇಲ್ಲ ಅನ್ನುವಂಗ ಮಾಡ್ಯಾರ. ಹೌದಲ್ಲೊ? ನಿನ್ನ ಮನಸ್ಸೂ ಕೆಡತೈತಿ, ಆರೋಗ್ಯಾನೂ ಕೆಡತೈತಿ.'

'ನೀನು ಹೇಳೋದೂ ಸರಿ. ಆದರೆ ಮಂದಿ ಅನಸವ್ವಳ ಬಗ್ಗೆ ಕೇಳಬಹುದು. ನನ್ನ ಬಗ್ಗೆ ಆಡಿಕೊಂಡು ನಗಬಹುದು'

'ಬೆನ್ನ ಹಿಂದೆ ಮಾತಾಡೋ ಮಂದಿಗೆ ಉತ್ತರ ಕೊಡೋ ಅವಶ್ಯಕತೆ ಇಲ್ಲ. ಒಬ್ಬೊಬ್ಬರ ಜೀವನ ಒಂದೊಂದು ರೀತಿ. ಬದುಕಂದ್ರ ಹಂಗೇನೊ ದ್ಯಾವಣ್ಣ. ಏರುಇಳುವು ಇರಾಕಬೇಕು ಮತ್ತೆ.' ದ್ಯಾವಣ್ಣನ ಮುಖದಲ್ಲಿ ಎಷ್ಟೋ ದಿನಗಳ ನಂತರ ಸಂತಸದ ನಗೆ ಮೂಡಿತು. ಕಾಕಾ ಹೇಳುವುದು ಯೋಗ್ಯವಿರಬೇಕು. ತನಗೆ ಅವನು ಕೆಟ್ಟದ್ದು ಬಯಸಲಿಕ್ಕಿಲ್ಲ. ಒಂದು ಸಲ ಮಲ್ಲೂರಿಗೆ ಹೋಗಿ ಬಂದರಾಯಿತು. ಅಲ್ಲಿಯ ಸ್ಥಿತಿಗತಿ ನೋಡಿದರಾಯಿತು. ಬೇಡ ಅನಿಸಿದರೆ ಬಿಟ್ಟರಾಯಿತು. ದೇವಣ್ಣ ಆವತ್ತೆ ಬೈಕ್ ಹಿಂದುಗಡೆ ದುಂಡಪ್ಪನನ್ನು ಕೂಡ್ರಿಸಿಕೊಂಡು ಮಲ್ಲೂರಿಗೆ ಹೋದ. ಅವನ ಬೈಕು ಆ ದಾರಿಯನ್ನು ಎಷ್ಟು ಸರಿಯಾಗಿ ನೆನಪಿಟ್ಟಿತ್ತು. ಎಲ್ಲಿ ತಗ್ಗಿದೆ, ಎಲ್ಲಿ ಅಪಾಯಕಾರಿ ತಿರುವಿದೆ, ಎಲ್ಲಿ ದೂಳು ಬಂದು ಮುಖಕ್ಕೆ ಅಡರುತ್ತದೆ, ಎಲ್ಲಿ ಡಾಂಬರು ಸಂಪೂರ್ಣ ಕಿತ್ತು ಹೋಗಿದೆ ಎಂಬುದನ್ನು ಅದು ಮರೆತೇ ಇಲ್ಲ. ದೇವಣ್ಣ ಸ್ಟೀರಿಂಗ್ ಹಿಡಿದು ಸುಮ್ಮನೆ ಕುಳಿತಂತಿದ್ದ. ಅದು ತನಗೆ ತಾನೆ ಚಲಿಸುತ್ತಿರುವಂತೆಯೂ ಅಪೇಕ್ಷಿಸಿದ ಜಾಗಕ್ಕೆ ಹೋಗುತ್ತಿರುವಂತೆಯೂ ಭಾಸವಾಯಿತು ಕಾಕಾನಿಗೆ.

***

ದುಸ್ಥಿತಿಯಲ್ಲಿದ್ದ ತಮ್ಮ ಚಾದಂಗಡಿಯನ್ನು ನೋಡಿ ದೇವಣ್ಣನಿಗೆ ಅಳುವೇ ಬಂದುಬಿಟ್ಟಿತು. ದೇವಣ್ಣ ಮಲ್ಲೂರಿಗೆ ಬಂದಿದ್ದು ದೊಡ್ಡ ಸುದ್ದಿಯೇ ಆಗಿಬಿಟ್ಟಿತು. ತಾಸಿನೊಳಗೆ ಹತ್ತಾರು ಜನ ಬಂದು ಅವನನ್ನು ಮಾತಾಡಿಸಿದರು. ಮೈದಡವಿದರು. ತಾವೇ ಅವನ ಹೊಟೇಲನ್ನು ಸ್ವಚ್ಛಗೊಳಿಸತೊಡಗಿದರು. ಎಲ್ಲಿ ನೋಡಿದರಲ್ಲಿ ಕಟ್ಟಿಕೊಂಡಿದ್ದ ಜೇಡ ಒರೆಸಿ, ನೆಲ ತಿಕ್ಕಿ, ಕಿಟಕಿ ಒರೆಸಿ, ಕಸಗುಡಿಸಿ ಹೊಟೇಲನ್ನು ಮತ್ತೆ ಮೊದಲಿನಂತೆ ಮಾಡಬೇಕಾದರೆ ಓಹ್, ಒಂದು ಜನ್ಮವನ್ನೇ ಕಳೆದಂತಾಯಿತು ದೇವಣ್ಣನಿಗೆ. ಒಣಗಿಹೊರಟಿದ್ದ ಅವನ ಹೊಟೇಲಿನ ಪ್ರಕೃತಿ ಮತ್ತೆ ಚಿಗುರೊಡೆಯಿತು. ದೂಳು ಕೊಡವಿಕೊಂಡ ಚರಿಗೆಕೊಡಗಳು ಮತ್ತೆ ಬಾವಿಗಿಳಿದು ನೀರು ತುಂಬಿಕೊಳ್ಳುವಾಗ ಹೊಸ ಸಂವೇದನೆಯ ಶಬ್ದ ಮಾಡಿದವು. ಸಂಜೆಗೆಯ ಘಮ ಗಾಳಿಯೊಂದಿಗೆ ಸುಂಯ್ಯನೆ ಒಳಹೋಗಿ ಮೂಲೆಮೂಲೆಯಲ್ಲಿನ ಮುಗ್ಗು ನಾತವನ್ನು ಹೊರಚೆಲ್ಲಿತು. ಬೆಳಕಿಗಿಂತೂ ಮನೆಯೊಳಗೆ ಎಷ್ಟು ಸಲ ಹೋದರೂ ತೃಪ್ತಿಯಿಲ್ಲ. ನಿರ್ಜೀವ ಕಣಗಳಿಗೆ ಅದು ಜೀವಶಕ್ತಿಯನ್ನು ತುಂಬಿಯೇ ತುಂಬುತ್ತಿತ್ತು.

ಮೊದಲನೆ ದಿನ ಹೊಟೇಲನ್ನು ಸ್ವಚ್ಛ ಮಾಡಿ ದಣಿದು ಮಲಗಿದರೆ ಅವನಿಗೆ ನಿದ್ದೆಯೇ ಬರುತ್ತಿಲ್ಲ. ತಾನೊಬ್ಬನೆ ಇದನ್ನು ನೀಗಿಸಬಲ್ಲೆನೆ? ಅವ್ವನಿಗೆ ವಯಸ್ಸಾಯಿತು. ಪಾಪ, ಆಕೆಯ ಪಾತ್ರ ಇದರಲ್ಲಿ ಏನೂ ಇಲ್ಲ. ಈ ವಯಸ್ಸಿನಲ್ಲಿ ಅವಳನ್ನು ಇಲ್ಲಿಗೆ ಕರೆತಂದು ದುಡಿಸುತ್ತಿದ್ದೇನೆಯೆ? ತನಗೆ ಹೊಟೇಲನ್ನು ಮತ್ತೆ ಆರಂಭಿಸಬೇಕೆಂಬ ಆಸೆಯೇನೂ ಇದ್ದಿರಲಿಲ್ಲ. ಅವ್ವ ಮಾತ್ರ ಅದನ್ನು ಸವಾಲು ಎನ್ನುವಂತೆ ತೆಗೆದುಕೊಂಡಿದ್ದಾಳೆ. 'ಊರಿಗೆ ಹೆದರಿ ಹೋದವರು' ಎಂದು ಅನಿಸಿಕೊಳ್ಳಬಾರದಂತೆ! ಚಿಗಿತು, ಬಲಿತು, ಬೇರುಬಿಟ್ಟು ತೋರಿಸಬೇಕು ಎನ್ನುತ್ತಾಳೆ. ಬರೀ ಅಂತಹವೇ ಯೋಚನೆಗಳು. ಅಪರಾತ್ರಿಯಲ್ಲಿ ಹೊರಗಡೆ ಏನೇನೊ ಸದ್ದು, ಸಪ್ಪಳ. ಎಷ್ಟೊ ಹೊತ್ತಿನಿಂದ ನಾಯಿಗಳು ಬೊಗಳುತ್ತಿವೆ. ಅವುಗಳನ್ನು ಯಾರಾದರೂ ಸುಮ್ಮನಿರಿಸಬಾರದೆ? ಹಿಂದೆ ಅನಸೂಯೆ ರಾತ್ರಿ ಎದ್ದು 'ಇವುಗಳ ಮಕಾ ಬಕ್ಕಬಾರ್ಲೆ ಬೀಳ್ಲೆ' ಎಂದು ಅವುಗಳನ್ನು ಓಡಿಸುತ್ತಿದ್ದಳು. ಥೂ! ಆಕೆಯ ನೆನಪು ಮಾಡಿಕೊಳ್ಳಲು ತನಗೆ ನಾಚಿಕೆಯಾಗಬೇಕು! ನಾಯಿಗಳು ರಾತ್ರಿಯ